ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 25/11/20

ಹೊಸ ಕಾನೂನು


ಮದುವೆ ಉದ್ದೇಶಕ್ಕಾಗಿ ಮತಾಂತರ ಇನ್ನು ಉತ್ತರ ಪ್ರದೇಶದಲ್ಲಿ ಕಾನೂನು ಬಾಹಿರ। ಕರಡು ಸುಗ್ರೀವಾಜ್ಞೆಗೆ ಸಚಿವ ಸಂಪುಟದ ಅನುಮೋದನ

# ಲವ್ ಜಿಹಾದ್ ಮದುವೆ ವಿರುದ್ಧ ಯೋಗಿ ಸರ್ಕಾರ ಸುಗ್ರೀವಾಜ್ಞೆ

25/11/20

ಲಖನೌ: ಮದುವೆಯ ಉದ್ದೇಶಕ್ಕಾಗಿ ಮತಾಂತರ ಕಾನೂನು ಬಾಹಿರ ಎಂದು ಘೋಷಿಸುವ ಮತ್ತು ಇಂಥ ಪ್ರಕರಣಗಳಲ್ಲಿ ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಕಾನೂನನ್ನು ಉತ್ತರಪ್ರದೇಶ ಸರ್ಕಾರ ಜಾರಿಗೆ ತರಲು ನಿರ್ಧರಿಸಿದೆ. ಈ ಕುರಿತ ಕರಡು ಸುಗ್ರೀವಾಜ್ಞೆಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸರ್ಕಾರ ಅನುಮೋದನೆ ನೀಡಿದೆ. ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಹಿಂದು ಮಹಿಳೆಯರನ್ನು ವಿವಾಹದ ಹೆಸರಿನಲ್ಲಿ ಬಲವಂತವಾಗಿ ಹಾಗೂ ಮೋಸದಿಂದ ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಲಾಗುತ್ತಿದ್ದು, ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಕಾನೂನು ರೂಪಿಸಲಾಗಿದೆ ಎಂದು ಸಚಿವ ಮತ್ತ ಯೋಗಿ ಸರ್ಕಾರದ ವಕ್ತಾರ ಸಿದ್ಧಾರ್ಥನಾಥ್ ಸಿಂಗ್



ತಿಳಿಸಿದ್ದಾರೆ. ಹೊಸ ಪ್ರಸ್ತಾವಿತ ಕಾನೂನಿನ ಅನ್ವಯ, ವಿವಾಹದ ಉದ್ದೇಶಕ್ಕಾಗಿಯೇ ಮತಾಂತರ ಮಾಡಿದರೆ 1ರಿಂದ 5 ವರ್ಷ ಜೈಲು ಮತ್ತು 15000 ರು.ಗಳವರೆಗೆ ದಂಡ ವಿಧಿಸಲಾಗುವುದು. ಒಂದು ವೇಳೆ ಮತಾಂತರಕ್ಕೆ ಒಳಗಾದ ಮಹಿಳೆ ಅಪ್ರಾಪ್ತೆಯಾಗಿದ್ದರೆ ಅಥವಾ ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ್ದಲ್ಲಿ ಅಂಥ ಪ್ರಕರಣಗಳಲ್ಲಿ 3-10 ವರ್ಷ ಜೈಲು ಶಿಕ್ಷೆ ಮತ್ತು 25000 ರು.ವರೆಗೆ ದಂಡ ವಿಧಿಸಲಾಗುವುದು. ಒಂದು ವೇಳೆ ಯಾವುದೇ ಸಂಘಟನೆ ಸಾಮೂಹಿಕ ಮತಾಂತರ ಮಾಡಿದಲ್ಲಿ, ಅವುಗಳ ಮುಖ್ಯಸ್ಥರಿಗೆ 3-10 ವರ್ಷ ಜೈಲು ಮತ್ತು 50000 ರು.ವರೆಗೆ ದಂಡ ವಿಧಿಸಲಾಗುವುದು.

ಇದೇ ವೇಳೆ ಯಾವುದೇ ವ್ಯಕ್ತಿ ವಿವಾಹದ ಬಳಿಕ ಮತಾಂತರವಾಗಲು ಬಯಸಿದರೆ ಅವರು ಹಾಗೆ ಮಾಡಬಹುದು. ಆದರೆ ಅದಕ್ಕೂ 2 ತಿಂಗಳು ಮೊದಲು ಜಿಲ್ಲಾಧಿಕಾರಿಗಳಿಗೆ ನಿಗದಿತ ಮಾದರಿಯಲ್ಲಿ ಮಾಹಿತಿ ನೀಡಬೇಕು. ಅವರ ಒಪ್ಪಿಗೆ ಸಿಕ್ಕಿದ ಬಳಿಕ ಮತಾಂತರ ಆಗಬಹುದು ಎಂದು ಸಿಂಗ್ ತಿಳಿಸಿದ್ದಾರೆ.

## ಸುಗ್ರೀವಾಜ್ಞೆಯಲ್ಲಿ ಏನಿದೆ ?

- **ವಿವಾಹದ ಕಾರಣಕ್ಕಾಗಿಯೇ ಮತಾಂತರ ಆಗುವುದು ಕಾನೂನು ಬಾಹಿರ.**
- **ಇಂಥ ಮತಾಂತರ ಮಾಡಿದರೆ 1-5 ವರ್ಷ ಜೈಲು, 15000 ರು. ದಂಡ**
- **ಮತಾಂತರ ಆದವಳು ಅಪ್ರಾಪ್ತೆ, ಎಸ್‌ಸಿ/ಎಸ್ಟಿ ಆದರೆ ಮತಾಂತರ ಮಾಡಿದವರಿಗೆ 10 ವರ್ಷ ಜೈಲು, 25000 ರು.ವರೆಗೂ ದಂಡ.**
- **ಸಾಮೂಹಿಕ ಮತಾಂತರ ಮಾಡಿದರೆ ಅಂಥ ಸಂಸ್ಥೆಗಳ ಮುಖ್ಯಸ್ಥರಿಗೆ 10 ವರ್ಷ ಸಜೆ, ₹50000 ವರೆಗೆ ದಂಡ**
- **ಮತಾಂತರ ಆಗಬೇಕಿದ್ದರೆ ಅಂಥವರಿಗೆ ಡಿಸಿ ಅನುಮತಿ ಕಡ್ಡಾಯ**

## ಹೊಸ ಕಾನೂನು ಜಾರಿ ಏಕೆ?

ಇತ್ತೀಚಿನ ವರ್ಷಗಳಲ್ಲಿ ಹಿಂದೂ ಮಹಿಳೆಯರನ್ನು ಇಸ್ಲಾಂಗೆ ಮತಾಂತರ ಮಾಡಿ ವಿವಾಹವಾಗುವ ಪ್ರಕರಣ ಹೆಚ್ಚಿದ್ದವು. ಜೊತೆಗೆ ವಂಚನೆ, ಸುಳ್ಳು, ಬಲವಂತದ ಮೂಲಕವೂ ಮತಾಂತರ ನಡೆಸಿದ ಪ್ರಕರಣಗಳು ನಡೆದಿದ್ದವು.

## ಇತರೆ ರಾಜ್ಯಗಳಲ್ಲೂ ಶೀಘ್ರ ಜಾರಿ

ಉತ್ತರಪ್ರದೇಶದಂತೆ ಹರ್ಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶ ಸರ್ಕಾರಗಳು ಈಗಾಗಲೇ ಬಲವಂತದ ಮತಾಂತರದ ವಿರುದ್ಧ ಕಠಿಣ ಕಾನೂನು ಜಾರಿಯ ಘೋಷಣೆ ಮಾಡಿವೆ. ಜೊತೆಗೆ ಇನ್ನಿತರೆ ಕೆಲ ಬಿಜೆಪಿ ಆಡಳಿತದ ರಾಜ್ಯಗಳಲ್ಲೂ ಇಂಥದ್ದೇ ಕಾನೂನು ಜಾರಿಯ ಸಾಧ್ಯತೆ ಇದೆ.